A

CCE RF/RR/ PF/PR

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SCHOOL EXAMINATION AND ASSESSMENT BOARD,
MALLESHWARAM, BENGALURU – 560 003

ಮಾರ್ಚ್/ಏಪ್ರಿಲ್ 2026 ರ ಪರೀಕ್ಷೆ - 1

MARCH/APRIL 2026 EXAMINATION - 1

ಮಾದರಿ ಉತ್ತರಗಳು

MODEL ANSWERS

ಸಂಕೇತ ಸಂಖ್ಯೆ : **85-K** CODE NO. : **85-K**

ವಿಷಯ : ಸಮಾಜ ವಿಜ್ಞಾನ

Subject : SOCIAL SCIENCE

(ಕನ್ನಡ ಮಾಧ್ಯಮ / Kannada Medium)

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)

(Regular Fresh / Regular Repeater / Private Fresh / Private Repeater)

ದಿನಾಂಕ : 02. 04. 2026] [ಗರಿಷ್ಠ ಅಂಕಗಳು : 80

Date : 02. 04. 2026] [Max. Marks : 80

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
I.	**ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** **8 × 1 = 8**	
1.	ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್ (A) ವಿಲಿಯಂ ಬೆಂಟಿಂಕ್ (B) ಕಾರ್ನ್‌ವಾಲೀಸ್ (C) ಆರ್.ಎಂ. ಬರ್ಡ್ (D) ಅಲೆಕ್ಸಾಂಡರ್ ರೀಡ್ *ಉತ್ತರ :* (B) ಕಾರ್ನ್‌ವಾಲೀಸ್	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
2.	1942 ರ ಸ್ಟಾಲಿನ್‌ಗ್ರಾಡ್ ಯುದ್ಧದಲ್ಲಿ ಜರ್ಮನ್ ಪಡೆಗಳನ್ನು ಸೋಲಿಸಿದ ದೇಶ (A) ಬ್ರಿಟನ್ (B) ಫ್ರಾನ್ಸ್ (C) ರಷ್ಯಾ (D) ಅಮೆರಿಕಾ ಸಂಯುಕ್ತ ಸಂಸ್ಥಾನ ***ಉತ್ತರ :*** (C) ರಷ್ಯಾ	1
3.	ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘದ (ಸಾರ್ಕ್) ಮುಖ್ಯ ಕಛೇರಿ ಇರುವುದು (A) ದೆಹಲಿಯಲ್ಲಿ (B) ಜಿನೇವಾದಲ್ಲಿ (C) ನ್ಯೂಯಾರ್ಕಿನಲ್ಲಿ (D) ಕಠ್ಮಂಡುವಿನಲ್ಲಿ ***ಉತ್ತರ :*** (D) ಕಠ್ಮಂಡುವಿನಲ್ಲಿ	1
4.	ಕರ್ನಾಟಕದಲ್ಲಿ ಜೀತ ಪದ್ಧತಿಯನ್ನು ರದ್ದುಗೊಳಿಸಿದವರು (A) ಪ್ರೊ ಎಂ. ಡಿ. ನಂಜುಂಡಸ್ವಾಮಿ (B) ಡಿ. ದೇವರಾಜ ಅರಸು (C) ಡಾ. ಶಿವರಾಮ ಕಾರಂತ (D) ಬಾಬಾ ಆಮ್ಟೆ ***ಉತ್ತರ :*** (B) ಡಿ. ದೇವರಾಜ ಅರಸು	1
5.	ಭಾರತದ ಪ್ರಾದೇಶಿಕ ಮತ್ತು ಸ್ವತಂತ್ರ ಜಿ.ಪಿ.ಎಸ್. ವ್ಯವಸ್ಥೆಯ ಹೆಸರು (A) ನಾವಿಕ್ (B) ಆರ್ಕ್‌ಇನ್ಫೋ (C) ಆಟೋಕ್ಯಾಡ್ (D) ಮ್ಯಾಪ್‌ಇನ್ಫೋ ***ಉತ್ತರ :*** (A) ನಾವಿಕ್	1
6.	ಮುಂಬೈ ಅನ್ನು 'ಭಾರತದ ಮ್ಯಾಂಚೆಸ್ಟರ್' ಎಂದು ಕರೆಯಲಾಗುತ್ತದೆ. ಏಕೆಂದರೆ, (A) ಇಲ್ಲಿ ಹೆಚ್ಚು ಕಾಗದದ ಕೈಗಾರಿಕೆಗಳಿವೆ (B) ಇಲ್ಲಿ ಹೆಚ್ಚು ಸಕ್ಕರೆ ಕೈಗಾರಿಕೆಗಳಿವೆ (C) ಇಲ್ಲಿ ಹೆಚ್ಚು ಅಲ್ಯೂಮಿನಿಯಂ ಕೈಗಾರಿಕೆಗಳಿವೆ (D) ಇಲ್ಲಿ ಹೆಚ್ಚು ಹತ್ತಿ ಬಟ್ಟೆ ಕೈಗಾರಿಕೆಗಳಿವೆ ***ಉತ್ತರ :*** (D) ಇಲ್ಲಿ ಹೆಚ್ಚು ಹತ್ತಿ ಬಟ್ಟೆ ಕೈಗಾರಿಕೆಗಳಿವೆ	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
7.	ಪ್ರತ್ಯಕ್ಷ ತೆರಿಗೆಗೆ ಉದಾಹರಣೆ (A) ಸರಕು ಮತ್ತು ಸೇವಾ ತೆರಿಗೆ (B) ವಿದೇಶೀ ಪ್ರವಾಸಿಗರ ಮೇಲಿನ ತೆರಿಗೆ (C) ಕಂಪನಿ ತೆರಿಗೆ (D) ಆಮದು-ರಫ್ತು ಸುಂಕಗಳು ***ಉತ್ತರ :*** (C) ಕಂಪನಿ ತೆರಿಗೆ	1
8.	ರಾಜು ಒಬ್ಬ ವಿದ್ಯಾರ್ಥಿಯಾಗಿದ್ದು, ಆತನು ಬ್ಯಾಂಕಿನಲ್ಲಿ ಒಂದು ಖಾತೆಯನ್ನು ತೆರೆಯಲು ಬಯಸಿದ್ದಾನೆ. ಆತನಿಗೆ ಸೂಕ್ತವಾದ ಬ್ಯಾಂಕ್ ಖಾತೆಯೆಂದರೆ, (A) ಉಳಿತಾಯ ಖಾತೆ (B) ಚಾಲ್ತಿ ಖಾತೆ (C) ಆವರ್ತ ಠೇವಣಿ ಖಾತೆ (D) ನಿಶ್ಚಿತ ಠೇವಣಿ ಖಾತೆ ***ಉತ್ತರ :*** (A) ಉಳಿತಾಯ ಖಾತೆ	1
II.	**ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು : 8 × 1 = 8**	
9.	ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗಳನ್ನು ಪ್ರಾರಂಭಿಸಿದವರು ಯಾರು ? ***ಉತ್ತರ :*** ಕೆ. ಶೇಷಾದ್ರಿ ಅಯ್ಯರ್	1
10.	ಎರಡನೆಯ ಮಹಾಯುದ್ಧವು ಶೀತಲ ಸಮರಕ್ಕೆ ನಾಂದಿಯಾಯಿತು. ಹೇಗೆ ? ***ಉತ್ತರ :*** — ಎರಡನೇ ಮಹಾಯುದ್ಧದ ನಂತರ ಸೋವಿಯತ್ ರಷ್ಯಾ ಮತ್ತು ಅಮೆರಿಕ ಪರಸ್ಪರ ವಿರೋಧಿಯಾದ ಶಕ್ತಿಶಾಲಿ ರಾಷ್ಟ್ರಗಳಾದವು. — ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್ ರಷ್ಯಾದ ನೇತೃತ್ವದಲ್ಲಿ ಎರಡು ಶಕ್ತಿಬಣಗಳು ರೂಪುಗೊಂಡವು. (ಯಾವುದಾದರೂ ಒಂದು)	1
11.	ದತ್ತಿ ಸಮಿತಿಯನ್ನು ಸ್ಥಾಪಿಸಲು ಕಾರಣವೇನು ? ***ಉತ್ತರ :*** ವಸಾಹತು ಶಾಹಿತ್ವಕ್ಕೆ ಒಳಪಟ್ಟಿದ್ದ ಪ್ರದೇಶಗಳು ಸಾರ್ವಭೌಮ ರಾಷ್ಟ್ರಗಳಾಗಿ ಉದಯಿಸುತ್ತಿದ್ದ ಕಾಲಾವಧಿಯಲ್ಲಿ ಈ ಪ್ರದೇಶಗಳ ಮೇಲುಸ್ತುವಾರಿ ಮಾಡಲು.	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
12.	ಎಂ.ಆರ್.ಪಿ.ಎಲ್. ವಿರೋಧಿ ಚಳವಳಿಯನ್ನು ಏಕೆ ಹಮ್ಮಿಕೊಳ್ಳಲಾಯಿತು ? ***ಉತ್ತರ :*** — ತೈಲಕಾರ್ಯಾಗಾರದಿಂದ ಹೊರಬರುವ ರಾಸಾಯನಿಕ ಅಂಶಗಳಿಂದ ಪರಿಸರ ನಾಶವಾಗುತ್ತದೆ ಎಂಬ ಕಾರಣದಿಂದ. — ಪರಿಸರವನ್ನು ರಕ್ಷಿಸಲು (ಯಾವುದಾದರೂ ಒಂದು)	1
13.	ಬೇಸಿಗೆಯಲ್ಲಿ ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಉಷ್ಣಾಂಶ ಕಡಿಮೆಯಿರುತ್ತದೆ. ಏಕೆ ? ***ಉತ್ತರ :*** — ದಕ್ಷಿಣ ಭಾರತವು ಮೂರು ಕಡೆಗಳಲ್ಲಿ ಸಾಗರಗಳಿಂದ ಆವೃತವಾಗಿರುವುದರಿಂದ — ಉತ್ತರ ಭಾರತವು ಸಮುದ್ರಕ್ಕೆ ದೂರವಾಗಿದೆ (ಯಾವುದಾದರೂ ಒಂದು)	1
14.	ಸುವರ್ಣ ಗ್ರಾಮೋದಯ ಯೋಜನೆಯನ್ನು ಏಕೆ ಜಾರಿಗೆ ತರಲಾಗಿದೆ ? ***ಉತ್ತರ :*** ಗ್ರಾಮಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಬಲಪಡಿಸಲು	1
15.	ಭಾರತದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಯಾವ ವರ್ಷದಲ್ಲಿ ಸ್ಥಾಪಿಸಲಾಯಿತು ? ***ಉತ್ತರ :*** 1978	1
16.	ಭಾರತ ಸಂವಿಧಾನದ 17ನೇ ವಿಧಿಯ ಮಹತ್ವವೇನು ? ***ಉತ್ತರ :*** ಇದು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸುತ್ತದೆ.	1
III.	**ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವುದು : 8 × 2 = 16**	
17.	ಕೇಂದ್ರ ಲೋಕಸೇವಾ ಆಯೋಗದ ರಚನೆಯನ್ನು ವಿವರಿಸಿ. ***ಅಥವಾ*** ಅಂತರರಾಷ್ಟ್ರೀಯ ಕಾರ್ಮಿಕ ಸಂಘದ ರಚನೆಯನ್ನು ವಿವರಿಸಿ. ***ಉತ್ತರ :***	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	— ಸಂವಿಧಾನದ ವಿಧಿ 35 ರ ಅಡಿ ಸ್ಥಾಪನೆ — ಒಬ್ಬರು ಅಧ್ಯಕ್ಷರು, 10 ಜನ ಸದಸ್ಯರು — ರಾಷ್ಟ್ರಾಧ್ಯಕ್ಷರಿಂದ ನೇಮಕ — ಆರು ವರ್ಷ ಅಥವಾ 65 ವರ್ಷಗಳ ವಯೋಮಾನ, ಯಾವುದು ಮೊದಲೋ – ಸದಸ್ಯತ್ವ ಅಂತ್ಯ — ಕೇಂದ್ರ ಕಚೇರಿ – ನವದೆಹಲಿ (ಯಾವುದಾದರೂ ನಾಲ್ಕು) $4 \times \frac{1}{2}$	2
	ಅಥವಾ	
	— ವಿಶ್ವಸಂಸ್ಥೆಯ ಆಶ್ರಯದ ವಿಶೇಷ ಘಟಕ — ಪ್ರತಿ ಸದಸ್ಯ ರಾಷ್ಟ್ರ – ಇಬ್ಬರು ಪ್ರತಿನಿಧಿ — ಒಬ್ಬರು ಕಾರ್ಮಿಕ ಪ್ರತಿನಿಧಿ — ಒಬ್ಬರು ಆಡಳಿತ ನಡೆಸುವವರ ಪ್ರತಿನಿಧಿ — ಕೇಂದ್ರ ಕಚೇರಿ – ಜಿನೇವಾ (ಯಾವುದಾದರೂ ನಾಲ್ಕು) $4 \times \frac{1}{2}$	2
18.	"ವರದಕ್ಷಿಣೆಯು ಸಮಾಜದಲ್ಲಿ ಲಿಂಗ ಅಸಮಾನತೆಯನ್ನು ಉಂಟು ಮಾಡುತ್ತದೆ." ಸಮರ್ಥಿಸಿ.	
	ಅಥವಾ	
	ತಾರತಮ್ಯದಿಂದ ರೂಪುಗೊಂಡ ಪೂರ್ವಾಗ್ರಹವು ಋಣಾತ್ಮಕ ಭಾವನೆಗಳಿಗೆ ಕಾರಣವಾಗುತ್ತದೆ. ಸಮರ್ಥಿಸಿ.	
	ಉತ್ತರ :	
	— ಸ್ತ್ರೀಯರ ಸ್ಥಾನಮಾನವನ್ನು ಕುಗ್ಗಿಸುತ್ತದೆ — ಸ್ತ್ರೀಯರ ಸ್ವಾಭಿಮಾನ ಮತ್ತು ಗೌರವವನ್ನು ಕುಗ್ಗಿಸುತ್ತದೆ	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಸ್ತ್ರೀ–ಪುರುಷರ ನಡುವೆ ಒಡಕು — ಅನೈತಿಕತೆ ಮತ್ತು ಕ್ರೌರ್ಯ ಹೆಚ್ಚಳ — ಕೌಟುಂಬಿಕ ಸಂಬಂಧಗಳು ಹಾಳಾಗುತ್ತವೆ — ಮೋಸದ ವಿವಾಹಗಳು — ಹೆಣ್ಣು ಭ್ರೂಣ ಹತ್ಯೆ — ಹೆಣ್ಣು ಶಿಶು ಹತ್ಯೆ — ವಿವಾಹ ವಿಚ್ಛೇದನ ಹೆಚ್ಚಳ (ಯಾವುದಾದರೂ ನಾಲ್ಕು) $4 \times \frac{1}{2}$ ***ಅಥವಾ*** — ಅಸಹನೆ — ತಿರಸ್ಕಾರ — ಅಗೌರವ — ದ್ವೇಷಭಾವನೆಗಳು ಉಂಟಾಗುತ್ತವೆ — ಸಾಮಾಜಿಕ ಅಂತರ ಹೆಚ್ಚಳ — ಸಾಮಾಜಿಕ ಸಂಘರ್ಷಕ್ಕೆ ಕಾರಣ (ಯಾವುದಾದರೂ ನಾಲ್ಕು) $4 \times \frac{1}{2}$	2 2
19.	ಸ್ವಾತಂತ್ರ್ಯಾನಂತರದಲ್ಲಿ ಭಾರತವು ಎದುರಿಸಿದ ಸಮಸ್ಯೆಗಳು ಯಾವುವು ? ***ಉತ್ತರ :*** — ನಿರಾಶ್ರಿತರ ಸಮಸ್ಯೆ — ಕೋಮುಗಲಭೆಗಳು — ಸರ್ಕಾರದ ರಚನೆ — ದೇಶೀಯ ಸಂಸ್ಥಾನಗಳ ವಿಲೀನೀಕರಣ — ಆಹಾರದ ಉತ್ಪಾದನೆ	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	— ಕೃಷಿ ಬೆಳವಣಿಗೆ — ಕೈಗಾರಿಕಾ ಬೆಳವಣಿಗೆ — ಕೋಮುವಾದ — ಪ್ರಾದೇಶಿಕವಾದ — ಅನಕ್ಷರತೆ — ಬಡತನ — ಭ್ರಷ್ಟಾಚಾರ — ಲಿಂಗ ತಾರತಮ್ಯ — ಜನಸಂಖ್ಯಾ ಸ್ಫೋಟ — ಲಾಭಕೋರತನ — ಕಳ್ಳಸಾಗಾಣಿಕೆ — ಆರ್ಥಿಕ ಅಸಮಾನತೆ (ಯಾವುದಾದರೂ ನಾಲ್ಕು) $4 \times \frac{1}{2}$	2
20.	'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿಯು ಭಾರತದಲ್ಲಿ ಬ್ರಿಟಿಷ್ ಅಧಿಕಾರದ ವಿಸ್ತರಣೆಗೆ ಸಹಾಯಕವಾಯಿತು. ಸಮರ್ಥಿಸಿ. ***ಉತ್ತರ :*** — ಯಾರೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನ ದತ್ತುಪುತ್ರನಿಗೆ ಉತ್ತರಾಧಿಕಾರದ ಹಕ್ಕಿರಲಿಲ್ಲ. — ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೇರಿಸಿಕೊಳ್ಳಲಾಗುತ್ತಿತ್ತು. — ಸತಾರ, ನಾಗಪುರ, ಜೈಪುರ, ಸಂಬಲ್‌ಪುರ, ಉದಯಪುರ, ಝಾನ್ಸಿ ಬ್ರಿಟಿಷರ ವಶವಾದವು. — ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು ಇದರ ಮೂಲಕ ಸಾಧಿಸಿದನು.	2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
21.	ಮಳೆಕೊಯ್ಲಿನ ಪ್ರಾಮುಖ್ಯತೆಯನ್ನು ವಿವರಿಸಿ. ***ಉತ್ತರ :*** — ನೀರು ಅಮೂಲ್ಯವಾದುದು — ಭಾರತದಲ್ಲಿ ಜಲಸಂಪತ್ತಿನ ಹಂಚಿಕೆಯು ತಾರತಮ್ಯದಿಂದ ಕೂಡಿದೆ — ಮಳೆಗಾಲದ ಅವಧಿ ಕಡಿಮೆಯಾಗಿದೆ / ಮಳೆಗಾಲಕ್ಕೆ ಮಳೆಯು ಸೀಮಿತವಾಗಿದೆ — ಹೆಚ್ಚು ಮಳೆಯ ಪ್ರದೇಶಗಳು ದೀರ್ಘವಾದ ಮಳೆರಹಿತ ಪ್ರದೇಶಗಳಾಗುತ್ತಿವೆ — ಬೇಸಿಗೆಯಲ್ಲಿ ನೀರಿನ ಕೊರತೆ ಕಂಡುಬರುತ್ತದೆ — ಜಲಕ್ಷಾಮದ ಪರಿಹಾರಕ್ಕೆ ಸರಳ ಮಾರ್ಗ ಮಳೆಕೊಯ್ಲು — ಸಾರ್ವಜನಿಕ ನೀರು ಪೂರೈಕೆ ಮೇಲಿನ ಅವಲಂಬನೆಯು ಕಡಿಮೆಯಾಗುವುದು — ಅಂತರ್ಜಲ ಮಟ್ಟದ ಮರುಪೂರಣ (ಯಾವುದಾದರೂ ನಾಲ್ಕು) $4 \times \frac{1}{2}$	2
22.	ತೋಟಗಾರಿಕೆ ಮತ್ತು ಪುಷ್ಪ ಬೇಸಾಯಗಳು ಭಾರತೀಯ ರೈತರ ಅಭಿವೃದ್ಧಿಗೆ ಸಹಾಯ ಮಾಡಿವೆ. ಸಮರ್ಥಿಸಿ. ***ಉತ್ತರ :*** — ತೋಟಗಾರಿಕೆ ಮತ್ತು ಪುಷ್ಪಬೇಸಾಯವು ಇತ್ತೀಚೆಗೆ ಭಾರತದಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿವೆ — ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ — ಹೂವುಗಳಿಗೆ ಅಪಾರ ಬೇಡಿಕೆಯಿದೆ — ಇವುಗಳು ರೈತರ ಆದಾಯ ವೃದ್ಧಿಸಲು ಪೂರಕವಾಗಿವೆ — ಮಹಿಳೆಯರಿಗೆ ಉಪಯುಕ್ತ — ಪ್ರಮುಖ ಮಾರುಕಟ್ಟೆ — ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ — ರಫ್ತು ಉತ್ತೇಜಿಸುತ್ತದೆ — ಇತರೆ ಬೆಳೆಗಳಿಗೆ ಪೂರಕವಾಗಿದೆ (ಯಾವುದಾದರೂ ನಾಲ್ಕು) $4 \times \frac{1}{2}$	2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
23.	ನೀತಿ ಆಯೋಗದ ಧ್ಯೇಯೋದ್ದೇಶಗಳನ್ನು ವಿವರಿಸಿ. ***ಉತ್ತರ :*** — ಭಾರತ ಸರ್ಕಾರದ ಚಿಂತಕರ ಚಾವಡಿಯಾಗಿ ಕಾರ್ಯನಿರ್ವಹಣೆ — ಆರ್ಥಿಕ ಅಭಿವೃದ್ಧಿಯನ್ನು ವೇಗಗೊಳಿಸುವ ನೋಡಲ್ ಏಜನ್ಸಿಯಾಗಿ ಕಾರ್ಯನಿರ್ವಹಣೆ — ಆರ್ಥಿಕ ನೀತಿ ನಿರೂಪಣೆಯಲ್ಲಿ ಕೆಳಮಟ್ಟದಿಂದ ಸಂಪನ್ಮೂಲಗಳ ಬಳಕೆ — ನೀತಿ ನಿರೂಪಣೆಯಲ್ಲಿ ರಾಜ್ಯ ಸರ್ಕಾರಗಳ ಒಳಗೊಳ್ಳುವಿಕೆಯ ಮೂಲಕ ಸಹಕಾರಿ ಒಕ್ಕೂಟಕ್ಕೆ ಉತ್ತೇಜನ	2
24.	ಪ್ರತಿ ವರ್ಷವು ಮಾರ್ಚ್ 15 ರಂದು ವಿಶ್ವಗ್ರಾಹಕರ ಹಕ್ಕುಗಳ ದಿನವನ್ನಾಗಿ ಆಚರಿಸಲಾಗುತ್ತದೆ. ಏಕೆ ? ***ಉತ್ತರ :*** — ಅಮೆರಿಕಾದ ಅಂದಿನ ಅಧ್ಯಕ್ಷ ಜಾನ್ ಎಫ್. ಕೆನಡಿ ತನ್ನ ದೇಶದ ನಾಗರಿಕರಿಗೆ ನಾಲ್ಕು ಗ್ರಾಹಕ ಹಕ್ಕುಗಳನ್ನು ನೀಡಿದರು. — ಸುರಕ್ಷತೆಯ ಹಕ್ಕು, ಆಯ್ಕೆಯ ಹಕ್ಕು, ಮಾಹಿತಿ ಪಡೆಯುವ ಹಕ್ಕು, ಆಲಿಸುವ ಹಕ್ಕು. 1 + 1	2
IV.	**ಆರು ವಾಕ್ಯಗಳಲ್ಲಿ ಉತ್ತರಿಸುವುದು : 9 × 3 = 27**	
25.	ಬಕ್ಸಾರ್ ಕದನದ ಪರಿಣಾಮಗಳನ್ನು ವಿವರಿಸಿ. ***ಅಥವಾ*** ಭಾರತದಲ್ಲಿ ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯು ಬೀರಿದ ಪರಿಣಾಮಗಳನ್ನು ವಿವರಿಸಿ. ***ಉತ್ತರ :*** — ಎರಡನೇ ಷಾ ಆಲಂ ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ ದಿವಾನಿ ಹಕ್ಕು ನೀಡಿದನು	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ಹಕ್ಕನ್ನೆಲ್ಲ ಬ್ರಿಟಿಷರಿಗೆ ಬಿಟ್ಟುಕೊಟ್ಟನು — ಔದ್‌ನ ನವಾಬ ಯುದ್ಧ ನಷ್ಟ ಪರಿಹಾರವಾಗಿ 50 ಲಕ್ಷರೂಪಾಯಿ ನೀಡಿದನು — ಮೀರ್ ಜಾಫರನ ಮಗನಿಗೆ ವಿಶ್ರಾಂತಿ ವೇತನ ನೀಡಲಾಯಿತು — ಬಂಗಾಳದ ಪೂರ್ಣ ಆಡಳಿತ ಕಂಪನಿಗೆ ಒಳಪಟ್ಟಿತು — ರಾಬರ್ಟ್ ಕ್ಲೈವ್ ಬಂಗಾಳದಲ್ಲಿ 'ದ್ವಿಸರ್ಕಾರ'ವನ್ನು ಜಾರಿಗೆ ತಂದನು $6 \times ½$	3
	ಅಥವಾ	
	— ಆಧುನಿಕತೆ, ಜಾತ್ಯಾತೀತತೆ, ಪ್ರಜಾಪ್ರಭುತ್ವದ ಆಲೋಚನೆ ಕ್ರಮದ ಬೆಳವಣಿಗೆ — ರಾಷ್ಟ್ರೀಯವಾದಿ ದೃಷ್ಟಿಕೋನದ ಬೆಳವಣಿಗೆ — ಸ್ಥಳೀಯ ಭಾಷೆಗಳಿಗೆ ಪ್ರೋತ್ಸಾಹ — ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ಒಗ್ಗಟ್ಟು (ನಾವಿನ್ಯತೆ) — ವೃತ್ತಪತ್ರಿಕೆಗಳ ಹುಟ್ಟಿ ಬೆಳೆಯಲಾರಂಭಿಸಿದವು — ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು — ಆಲೋಚನಾ ನಾವಿನ್ಯತೆ — ಭಾರತೀಯ ಸಂಪ್ರದಾಯ ಮತ್ತು ಸಂಸ್ಕೃತಿಗಳ ಅರಿವು — ವಿವಿಧ ದೇಶಗಳ ಸ್ವಾತಂತ್ರ್ಯ ಹೋರಾಟಗಳಿಂದ ಪ್ರಭಾವಿತರಾದ ಭಾರತೀಯರು (ಯಾವುದಾದರೂ ಆರು) $6 \times ½$	3
26.	ಭಾರತದಲ್ಲಿ ಕಂಡುಬರುವ ಅರಣ್ಯಗಳ ಪ್ರಕಾರಗಳು ಯಾವುವು ?	
	ಅಥವಾ	
	ಭಾರತದ ಪಶ್ಚಿಮ ಕರಾವಳಿಯ ಪ್ರಮುಖ ಬಂದರುಗಳು ಯಾವುವು ?	
	ಉತ್ತರ :	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ		ಅಂಕಗಳು
	— ನಿತ್ಯಹರಿದ್ವರ್ಣದ ಅರಣ್ಯಗಳು — ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳು — ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು — ಮ್ಯಾಂಗ್ರೋವ್ ಅರಣ್ಯಗಳು — ಮರುಭೂಮಿ ಅರಣ್ಯಗಳು — ಹಿಮಾಲಯದ ಅಲ್ಪೈನ್ ಅರಣ್ಯಗಳು	$6 \times \frac{1}{2}$	3
	ಅಥವಾ		
	— ಕಾಂಡ್ಲಾ — ಮಂಬೈ — ನವಶೇವಾ — ಮರ್ಮಗೋವಾ — ನವಮಂಗಳೂರು — ಕೊಚ್ಚಿ	$6 \times \frac{1}{2}$	3
27.	ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ. ದೃಢೀಕರಿಸಿ.		
	ಅಥವಾ		
	ಸಾರ್ವಜನಿಕ ಹಣಕಾಸು ವೈಯಕ್ತಿಕ ಹಣಕಾಸಿಗಿಂತ ಭಿನ್ನವಾಗಿದೆ. ದೃಢೀಕರಿಸಿ.		
	ಉತ್ತರ :		
	— ಗ್ರಾಮಗಳ ಅಭಿವೃದ್ಧಿಯಲ್ಲಿ ಗ್ರಾಮದ ಜನರು ಪಾಲ್ಗೊಳ್ಳುವಂತೆ ಮಾಡುವುದು — ಗ್ರಾಮೀಣ ಮೂಲಸೌಕರ್ಯಗಳ ಅಭಿವೃದ್ಧಿ — ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಕ್ಕೆ ಪ್ರೋತ್ಸಾಹ — ವಯಸ್ಕರ ಶಿಕ್ಷಣಕ್ಕೆ ಪ್ರೋತ್ಸಾಹ — ತಾಂತ್ರಿಕ ಮತ್ತು ವೃತ್ತಿ ತರಬೇತಿಗೆ ಪ್ರೋತ್ಸಾಹ		

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ — ಗ್ರಾಮೀಣ ಉತ್ಪಾದಕ ಚಟುವಟಿಕೆಗಳ ಅಭಿವೃದ್ಧಿ — ಗುಡಿ ಕೈಗಾರಿಕೆಗಳ ಅಭಿವೃದ್ಧಿ — ಕೃಷಿ ನೀರಾವರಿ ವಿಸ್ತರಣೆ — ಬಡತನ ಮತ್ತು ನಿರುದ್ಯೋಗ ಹೋಗಲಾಡಿಸುವುದು — ವಸತಿಹೀನರಿಗೆ ಮನೆಗಳನ್ನು ನಿರ್ಮಿಸಿಕೊಡುವುದು — ಪಡಿತರ ವ್ಯವಸ್ಥೆ ಬಲಪಡಿಸುವುದು — ಸಮಾಜ ಕಲ್ಯಾಣ ಸೇವೆಗಳನ್ನು ಒದಗಿಸುವುದು — ಮಹಿಳಾ ಸ್ವಸಹಾಯ ಸಂಘಗಳಿಗೆ ಪ್ರೋತ್ಸಾಹ — ಗ್ರಾಮೀಣ ಕಲೆ ಮತ್ತು ಸಂಸ್ಕೃತಿ ಶ್ರೀಮಂತಗೊಳಿಸುವುದು — ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳು (ಯಾವುದಾದರೂ ಆರು) $6 \times \frac{1}{2}$	3
	ಅಥವಾ	

ವೈಯಕ್ತಿಕ ಹಣಕಾಸು	***ಸಾರ್ವಜನಿಕ ಹಣಕಾಸು***
— ಒಬ್ಬ ವ್ಯಕ್ತಿ ಅಥವಾ ಕುಟುಂಬದ ಆದಾಯ, ವೆಚ್ಚಗಳಿಗೆ ಸಂಬಂಧಿಸಿದೆ	— ಸರ್ಕಾರದ ಆದಾಯ-ವೆಚ್ಚಗಳಿಗೆ ಸಂಬಂಧಿಸಿದೆ
— ಆದಾಯಕ್ಕೆ ತಕ್ಕಂತೆ ವೆಚ್ಚ ಮಾಡಲಾಗುತ್ತದೆ	— ವೆಚ್ಚಗಳಿಗೆ ತಕ್ಕಂತೆ ಆದಾಯವನ್ನು ಹೊಂದಿಸಲಾಗುತ್ತದೆ
— ಹಣಕಾಸಿನ ವ್ಯವಹಾರಗಳನ್ನು ಗೌಪ್ಯವಾಗಿಡಲಾಗುತ್ತದೆ	— ಶಾಸನ ಸಭೆಗಳಲ್ಲಿ ಚರ್ಚಿಸಲಾಗುತ್ತದೆ ಹಾಗೂ ಮಾಧ್ಯಮಗಳಲ್ಲಿ ಪ್ರಚಾರ ಮಾಡಲಾಗುತ್ತದೆ
— ಉಳಿತಾಯ ವ್ಯಕ್ತಿ ಅಥವಾ ಕುಟುಂಬದ ಪ್ರಗತಿಗೆ ಪೂರಕ	— ಸರ್ಕಾರ ಉಳಿತಾಯ ಮಾಡಿದರೆ ದೇಶದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ
(ಯಾವುದಾದರೂ ಮೂರು) 3×1	3

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
28.	ಅಂಚೆ ಕಛೇರಿಗಳು ನಿರ್ವಹಿಸುವ ಹಣಕಾಸಿನ ವ್ಯವಹಾರಗಳನ್ನು ವಿವರಿಸಿ. **ಅಥವಾ** ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರವನ್ನು ವಿವರಿಸಿ. ***ಉತ್ತರ :*** — ರಾಷ್ಟ್ರೀಯ ಉಳಿತಾಯ ಪತ್ರ — ಅಂಚೆ ಉಳಿತಾಯ ಖಾತೆ — ಕಿಸಾನ್ ವಿಕಾಸ ಪತ್ರ — ಅಂಚೆ ವಿಮೆ ಯೋಜನೆ — ನಿವೃತ್ತಿ ವೇತನ — ಹಣ ವರ್ಗಾವಣೆ — ಮಾಹೆಯಾನ ತೀರು ಠೇವಣಿಗಳು — ವಿವಿಧ ಬಿಲ್‌ಗಳ ಪಾವತಿ — ಡೆಬಿಟ್ ಕಾರ್ಡ್ (ATM) (ಯಾವುದಾದರೂ ಆರು) $6 \times \frac{1}{2}$ **ಅಥವಾ** — ಜನರ ಉಳಿತಾಯವನ್ನು ಬಂಡವಾಳ ರೂಪದಲ್ಲಿ ಸಂಗ್ರಹಿಸುತ್ತಾರೆ — ಉದ್ಯೋಗಗಳನ್ನು ಒದಗಿಸುತ್ತಾರೆ — ದೇಶದ ಆದಾಯ ಮತ್ತು ತಲಾವರಮಾನವನ್ನು ಹೆಚ್ಚಿಸುತ್ತಾರೆ — ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸುತ್ತಾರೆ — ಉತ್ತಮ ವಸ್ತುಗಳನ್ನು ಕಡಿಮೆ ದರದಲ್ಲಿ ಒದಗಿಸುತ್ತಾರೆ — ಜನರ ಜೀವನಮಟ್ಟ ಉತ್ತಮಗೊಳಿಸಲು ಶ್ರಮಿಸುತ್ತಾರೆ — ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುತ್ತಾರೆ — ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುತ್ತಾರೆ — ಸಮಾಜದ ಏಳಿಗೆಗೆ ಸಹಾಯ ಮಾಡುತ್ತಾರೆ	3

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	— ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ — ಹೊಸ ಬದಲಾವಣೆಗಳನ್ನು ರೂಢಿಗೆ ತರುತ್ತಾರೆ — ಕೌಶಲ್ಯ ಅಭಿವೃದ್ಧಿಗೆ ಉತ್ತೇಜನ — ಆದಾಯ ಮತ್ತು ಸಂಪತ್ತಿನ ಕೇಂದ್ರೀಕರಣವನ್ನು ತಡೆಗಟ್ಟುತ್ತದೆ (ಯಾವುದಾದರೂ ಆರು) 6 × ½	3
29.	ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಜಾರಿಗೆ ತಂದ ಸುಧಾರಣಾ ಕಾರ್ಯಗಳಾವುವು ? ***ಉತ್ತರ :*** — ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಮತ್ತು ಮಹಿಳೆಯರ ಸಬಲೀಕರಣ – ಶಿಕ್ಷಣವೇ ಮಾರ್ಗ — ಮನುಷ್ಯ ಘನತೆಯಿಂದ ಬದುಕುವ ಸಮಾಜದ ನಿರ್ಮಾಣದ ಉದ್ದೇಶ — ಸಾಮಾಜಿಕ ಪ್ರತಿರೋಧದ ಚಳವಳಿಗಳ ಪ್ರಾರಂಭ — ಪ್ರಮುಖ ಆಶಯ – ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು — ಪರ್ಯಾಯ ದೇವಾಲಯಗಳ ಸ್ಥಾಪನೆ — ವೈಕಂ ಸತ್ಯಾಗ್ರಹ – ದೇವಾಲಯ ಪ್ರವೇಶ ಚಳವಳಿ — ಗುರುವಾಯೂರು ದೇವಾಲಯ ಪ್ರವೇಶ ಚಳವಳಿ (ಯಾವುದಾದರೂ ಆರು) 6 × ½	3
30.	ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಕಾರಣಗಳನ್ನು ವಿವರಿಸಿ. ***ಉತ್ತರ :***	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿ — ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು — ಕರಕುಶಲಗಾರರು ನಿರುದ್ಯೋಗಿಗಳಾದರು — ನೇಕಾರಿಕೆ ವೃತ್ತಿಯವರು ಉದ್ಯೋಗ ಕಳೆದುಕೊಂಡರು — ಗೃಹಕೈಗಾರಿಕೆಗಳು ನಷ್ಟ ಅನುಭವಿಸಿದವು — ಭಾರತದ ವಸ್ತುಗಳ ಮೇಲೆ ದುಬಾರಿ ಸುಂಕ — ಜಮೀನ್ದಾರರು ರೈತರನ್ನು ಶೋಷಿಸಿದರು — ತಾಲ್ಲೂಕುದಾರರ ಹಕ್ಕುಗಳನ್ನು ಹಿಂಪಡೆಯಲಾಯಿತು — ಇನಾಂ ಭೂಮಿ ಹಿಂಪಡೆಯಲಾಯಿತು — ಕೃಷಿಕರು ಅವಮಾನ ಮತ್ತು ಆರ್ಥಿಕ ಸಂಕಷ್ಟ ಅನುಭವಿಸಿದರು (ಯಾವುದಾದರೂ ಆರು) $6 \times \frac{1}{2}$	3
31.	"ಭಯೋತ್ಪಾದನೆಯು ಜಾಗತಿಕ ಭದ್ರತೆಗೆ ಆತಂಕಕಾರಿಯಾಗಿದೆ." ಹೇಗೆ ? ***ಉತ್ತರ :*** — ವ್ಯಕ್ತಿಗಳ ಪ್ರಾಣಹಾನಿ — ಆಸ್ತಿ-ಪಾಸ್ತಿಗಳ ನಷ್ಟ ಉಂಟುಮಾಡುತ್ತದೆ — ಆರ್ಥಿಕ ಅಭಿವೃದ್ಧಿಗೆ ತಡೆ — ಸಾಮಾಜಿಕ ಸಂಸ್ಕೃತಿಗೆ ಧಕ್ಕೆ — ಮಾನಸಿಕ ವೇದನೆ ಉಂಟುಮಾಡುತ್ತದೆ — ಕಾನೂನು-ಸುವ್ಯವಸ್ಥೆಯ ನಿರ್ವಹಣೆಗೆ ಅಡ್ಡಿ $6 \times \frac{1}{2}$	3

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
32.	ಸಂಘಟಿತ ವಲಯದ ದುಡಿಮೆಗಾರರ ಲಕ್ಷಣಗಳನ್ನು ವಿವರಿಸಿ. ***ಉತ್ತರ :*** — ಕಾನೂನು ಕಾಯ್ದೆಗಳಿಗೆ ಬದ್ಧತೆ — ನಿಗದಿತ ಕಾರ್ಯಕ್ಷೇತ್ರ — ಅಧಿಕಾರದ ಏಣಿ ಶ್ರೇಣಿ — ವಿಶೇಷ ಪರಿಣಿತಿ, ತರಬೇತಿ, ಅನುಭವ, ಶೈಕ್ಷಣಿಕ ಅರ್ಹತೆಗಳಿಗೆ ಅವಕಾಶ — ಎಲ್ಲಾ ವ್ಯವಹಾರಗಳು ಬರಹ ರೂಪದಲ್ಲಿರುತ್ತವೆ — ನಿಗದಿತ ವೇತನ ಇರುತ್ತದೆ — ಭತ್ಯೆ ಇರುತ್ತದೆ — ವಿರಾಮ ವೇತನ ಇರುತ್ತದೆ — ನಿವೃತ್ತಿವೇತನ ಇರುತ್ತದೆ — ವೈದ್ಯಕೀಯ ಸೌಲಭ್ಯವಿದೆ — ನಿಗದಿತ ಸಮಯದಲ್ಲಿ ಮಾತ್ರ ಕಾರ್ಯನಿರ್ವಹಣೆ (ಯಾವುದಾದರೂ ಆರು) $6 \times \frac{1}{2}$	3
33.	"ಭೂಕಂಪಗಳು ಅತ್ಯಂತ ವಿನಾಶಕಾರಿಯಾಗಿವೆ." ಈ ಹೇಳಿಕೆಯನ್ನು ಸಮರ್ಥಿಸಿ. ***ಉತ್ತರ :*** — ಜನರ ಸಾವುನೋವು ಮತ್ತು ಆಸ್ತಿಪಾಸ್ತಿಗಳಿಗೆ ಹಾನಿ — ಸಾರಿಗೆ ಸಂಪರ್ಕ ಕಡಿತ – ವಿದ್ಯುತ್ ಕಡಿತ — ಸಾಂಕ್ರಾಮಿಕ ರೋಗಗಳ ಹರಡುವಿಕೆ	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಸಾಗರದ ಅಲೆಗಳು ದಡಗಳಿಗೆ ಅಪ್ಪಳಿಸುವಿಕೆ — ಸುನಾಮಿ — ನದಿಯ ದಿಕ್ಕು ಬದಲಾಗುವಿಕೆ $6 \times \frac{1}{2}$	3
V.	**ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : 4 × 4 = 16**	
34.	"ಬ್ರಿಟಿಷರ ಆಳ್ವಿಕೆಯ ವಿರುದ್ಧ ಹಲಗಲಿ ಬೇಡರ ಪ್ರತಿಭಟನೆಯು ಒಂದು ಪ್ರಮುಖ ಸಶಸ್ತ್ರ ದಂಗೆಯಾಗಿತ್ತು." ಹೇಗೆ ? ***ಅಥವಾ*** ಸ್ವಾಮಿ ದಯಾನಂದ ಸರಸ್ವತಿಯವರ ಕೊಡುಗೆಗಳನ್ನು ವಿಶ್ಲೇಷಿಸಿ. ***ಉತ್ತರ :*** — ಬಾಗಲಕೋಟೆ ಜಿಲ್ಲೆ – ಮುಧೋಳ ತಾಲ್ಲೂಕು – ಹಲಗಲಿ – ಪುಟ್ಟ ಗ್ರಾಮ — ಬ್ರಿಟಿಷರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಶಸ್ತ್ರಗಳ ಬಳಕೆ ನಿರ್ಬಂಧಿಸಿ ಕಾನೂನನ್ನು ಜಾರಿಗೊಳಿಸಿದರು — ಇದನ್ನು ಹಲಗಲಿಗೂ ಅನ್ವಯಿಸಲಾಯಿತು — ಹಲಗಲಿಯ ಬೇಡರು, ಬೇಟೆಯಾಡಲು ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ — ತಮ್ಮ ಹಕ್ಕನ್ನು ಉಳಿಸಿಕೊಳ್ಳಲು ಬ್ರಿಟಿಷರ ವಿರುದ್ಧ ಸಿಡಿದೆದ್ದರು — ಈ ಹೋರಾಟದಲ್ಲಿ ಹಲಗಲಿಯ ಸುತ್ತಮುತ್ತಲಿನ — ಮಂಟೂರು — ಬೋದಾನಿ — ಆಲಗುಂಡಿಯ ಬೇಡರು ಸೇರಿಕೊಂಡರು	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಬ್ರಿಟಿಷರ ಸೇನೆ ಹಲಗಲಿ ಗ್ರಾಮವನ್ನು ತುಲುಪಿತು	
	— ಬಂಡಾಯವೆದ್ದ ಬೇಡರನ್ನು ಹತ್ತಿಕ್ಕಲಾಯಿತು	
	— ಬಂಡಾಯಗಾರರನ್ನು ಗಲ್ಲಿಗೇರಿಸಲಾಯಿತು	
	— ಇದರಿಂದ ಈ ಬಂಡಾಯವು ಕೊನೆಗೊಂಡಿತು	
	(ಯಾವುದಾದರೂ ಎಂಟು) 8 × ½	4
	ಅಥವಾ	
	— ಆರ್ಯ ಸಮಾಜವನ್ನು ಸ್ಥಾಪಿಸಿದರು	
	— ವೇದಗಳು ಸತ್ಯ ಮತ್ತು ಜ್ಞಾನದ ಮೂಲವೆಂದರು	
	— 'ವೇದಗಳಿಗೆ ಹಿಂತಿರುಗಿ' ಎಂದು ಘೋಷಿಸಿದರು	
	— ವಿಗ್ರಹಾರಾಧನೆ, ಜಾತಿ ಪದ್ಧತಿಯ ಖಂಡನೆ	
	— ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು	
	— ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು	
	— ಸತ್ಯಾರ್ಥ ಪ್ರಕಾಶ ಕೃತಿ ರಚಿಸಿದರು	
	— ಶುದ್ಧಿ ಚಳವಳಿ ಪ್ರಾರಂಭಿಸಿದರು	
	— 'ಭಾರತೀಯರಿಗೆ ಭಾರತ' ಎಂದು ಘೋಷಿಸಿದರು	
	(ಯಾವುದಾದರೂ ಎಂಟು) 8 × ½	4

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
35.	ಮಣ್ಣಿನ ಸವೆತವನ್ನು ತಡೆಗಟ್ಟುವ ವಿಧಾನಗಳನ್ನು ತಿಳಿಸಿ. **ಅಥವಾ** ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ತಿಳಿಸಿ. ***ಉತ್ತರ :*** — ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು — ಅಡ್ಡ ಬದುಗಳ ನಿರ್ಮಾಣ — ಅರಣ್ಯನಾಶವನ್ನು ತಡೆಗಟ್ಟುವುದು — ಅರಣ್ಯಗಳ ಬೆಳವಣಿಗೆಗೆ ಪ್ರೋತ್ಸಾಹ — ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು — ನೀರಿನ ಯೋಜಿತ ಬಳಕೆ — ಚೆಕ್ ಡ್ಯಾಮ್‌ಗಳ ನಿರ್ಮಾಣ — ವೈಜ್ಞಾನಿಕ ಬೇಸಾಯ — ಮೇಲ್ಮಣ್ಣಿನ ಬಳಕೆ ನಿಯಂತ್ರಣ — ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ (ಯಾವುದಾದರೂ ಎಂಟು) $8 \times \frac{1}{2}$ **ಅಥವಾ** — ಕಚ್ಚಾ ವಸ್ತುಗಳ ಲಭ್ಯತೆ — ಶಕ್ತಿ ಸಂಪನ್ಮೂಲಗಳ ಲಭ್ಯತೆ — ಮಾರುಕಟ್ಟೆ ಸೌಲಭ್ಯ — ಸಂಚಾರ ಸೌಲಭ್ಯ — ಕಾರ್ಮಿಕರ ಪೂರೈಕೆ — ಬಂದರುಗಳ ಸೌಲಭ್ಯ — ಕಡಿಮೆ ದರದ ಭೂಮಿ ದೊರೆಯುವಿಕೆ — ತಾಂತ್ರಿಕತೆ — ಸರ್ಕಾರದ ನೀತಿ ನಿಯಮಗಳು (ಯಾವುದಾದರೂ ಎಂಟು) $8 \times \frac{1}{2}$	4 4

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
36.	ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರಗಾಮಿಗಳ ಪಾತ್ರವನ್ನು ತಿಳಿಸಿ. ***ಉತ್ತರ :*** — ಬಾಲಗಂಗಾಧರ ತಿಲಕರು ತೀವ್ರವಾದಿ ಬಣದ ಪ್ರಮುಖರು — ಮಂದಗಾಮಿಗಳ ಮೃದು ಧೋರಣೆಯನ್ನು ಟೀಕಿಸಿದರು — ಮಂದಗಾಮಿಗಳನ್ನು ರಾಜಕೀಯ ಭಿಕ್ಷುಕರು ಎಂದು ಕರೆದರು — ಬಂಗಾಳ ವಿಭಜನೆಯನ್ನು ವಿರೋಧಿಸಿದರು — ಸ್ವದೇಶಿ ಚಳವಳಿಯನ್ನು ಬೆಂಬಲಿಸಿದರು — ಸ್ವಯಂ ಆಳ್ವಿಕೆಯನ್ನು ಪ್ರತಿಪಾದಿಸಿದರು — 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ; ಅದನ್ನು ಪಡೆದೇ ತೀರುತ್ತೇನೆ' ಎಂದು ತಿಲಕರು ಘೋಷಿಸಿದರು — ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸಿದರು — ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿದರು — ಗಣೇಶ, ಶಿವಾಜಿ, ದುರ್ಗಾ ಪೂಜೆ ಉತ್ಸವಗಳ ಮೂಲಕ ರಾಷ್ಟ್ರೀಯತೆಗೆ ಪ್ರಚೋದಿಸಿದರು — ಮರಾಠಿ ಭಾಷೆಯಲ್ಲಿ ಕೇಸರಿ, ಇಂಗ್ಲಿಷ್ ಭಾಷೆಯಲ್ಲಿ ಮರಾಠ ಪತ್ರಿಕೆಯನ್ನು ತಿಲಕರು ಪ್ರಕಟಿಸಿದರು — ಪತ್ರಿಕೆಗಳ ಮೂಲಕ ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು — ಬ್ರಿಟಿಷ್ ಸರ್ಕಾರದಿಂದ ತಿಲಕರ ಬಂಧನ — ಜೈಲಿನಲ್ಲಿ 'ಗೀತಾರಹಸ್ಯ' ರಚನೆ (ಯಾವುದಾದರೂ ಎಂಟು) $8 \times \frac{1}{2}$	4

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
37.	ಆರ್ಥಿಕ ಅಸಮಾನತೆಯನ್ನು ನಿವಾರಿಸಲು ಅಗತ್ಯವಾಗಿರುವ ಕ್ರಮಗಳನ್ನು ವಿವರಿಸಿ. ***ಉತ್ತರ :*** — ಉತ್ತಮ ಆರ್ಥಿಕ ಸುಧಾರಣೆಗಳು — ಯೋಜನಾ ಬದ್ಧ ಹಣಕಾಸಿನ ನಿರ್ವಹಣೆ — ಪ್ರಗತಿಪರ ತೆರಿಗೆ ಪದ್ಧತಿ — ಸಣ್ಣ ಹಾಗೂ ಗ್ರಾಮೀಣ ಮಟ್ಟದ ಗುಡಿ ಹಾಗೂ ಗೃಹಕೈಗಾರಿಕೆಗಳ ಅಭಿವೃದ್ಧಿ — ಬೃಹತ್ ಉದ್ಯಮ ಹಾಗೂ ಏಕಸ್ವಾಮ್ಯ ವಲಯಗಳ ಸರಿಯಾದ ನಿಯಂತ್ರಣ — ಭೂಸುಧಾರಣೆ — ಕಾರ್ಮಿಕ ಪರ ಧೋರಣೆಗಳು — ಸಾಮಾಜಿಕ ಭದ್ರತೆ — ಬೃಹತ್ ಕೈಗಾರಿಕೆ ಮತ್ತು ನೀರಾವರಿ ಅಣೆಕಟ್ಟುಗಳ ನಿರ್ಮಾಣ ಸಂದರ್ಭದಲ್ಲಿ ಸಮರ್ಪಕ ಪರಿಹಾರ ಮತ್ತು ಪುನರ್ವಸತಿ ಒದಗಿಸುವುದು — ಆದಾಯ ಗಳಿಸುವ ಅವಕಾಶಗಳನ್ನು ಒದಗಿಸುವುದು (ಯಾವುದಾದರೂ ಎಂಟು) $8 \times \frac{1}{2}$	4
VI. 38.	**ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನ ಯಾವುದಾದರೂ ಐದನ್ನು ಗುರುತಿಸುವುದು : $5 \times 1 = 5$** a) ಕರ್ನಾಟಕ ಸಂಕ್ರಾಂತಿ ವೃತ್ತ b) ಮಲಬಾರ್ ತೀರ	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು

c) ಭಾಕ್ರಾ-ನಂಗಲ್ ಅಣೆಕಟ್ಟು

d) ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

e) ಭದ್ರಾವತಿ

f) ಕಲ್ಪಾಕ್ಕಂ

g) ಬಾಂಬೆ ಹೈ

h) ಕೊಯ್ನಾ

i) ದುರ್ಗಾಪುರ

j) ಶಿಲ್ಲಾಂಗ್

ಉತ್ತರ :



ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ		ಅಂಕಗಳು
	ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : ***(ಪ್ರಶ್ನೆ ಸಂಖ್ಯೆ 38 ರ ಬದಲಿಗೆ)*** ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳೇನು ? ***ಅಥವಾ*** ಹಿಮಾಲಯ ಪರ್ವತಗಳ ಪ್ರಯೋಜನಗಳೇನು ? ***ಉತ್ತರ :*** — ನೀರಾವರಿ ಸೌಲಭ್ಯ — ಜಲವಿದ್ಯುಚ್ಛಕ್ತಿ ಉತ್ಪಾದನೆ — ಪ್ರವಾಹ ನಿಯಂತ್ರಣ — ನೌಕಾಯಾನ — ಗೃಹಬಳಕೆ — ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು — ಮಣ್ಣಿನ ಸವಕಳಿ ನಿಯಂತ್ರಣ — ಮೀನುಗಾರಿಕೆ ಅಭಿವೃದ್ಧಿ — ಅರಣ್ಯಸಂಪತ್ತು ಅಭಿವೃದ್ಧಿ — ಮನೋರಂಜನೆ	$10 \times \frac{1}{2}$	5
	ಅಥವಾ — ಜನಜೀವನದ ಮೇಲೆ ಅಪಾರ ಪ್ರಭಾವ — ಭಾರತಕ್ಕೆ ರಕ್ಷಣೆ — ಉತ್ತರ ಏಷ್ಯಾದಿಂದ ಬೀಸುವ ಶೀತಗಾಳಿ ತಡೆಯುತ್ತದೆ		

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ		ಅಂಕಗಳು
	— ನದಿಗಳ ಉಗಮಸ್ಥಾನ		
	— ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲ		
	— ವಿಶಾಲವಾದ ಮೈದಾನ ನಿರ್ಮಿಸಿದೆ		
	— ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಕ್ಕೆ ಆಶ್ರಯ		
	— ಅಪಾರವಾದ ಖನಿಜ ಸಂಪನ್ಮೂಲವಿದೆ		
	— ಧಾರ್ಮಿಕ ಕೇಂದ್ರಗಳು *ಉದಾ.:* ಬದರಿ, ಕೇದಾರ		
	— ಪ್ರವಾಸೋದ್ಯಮ		
	— ಗಿರಿಧಾಮಗಳು		
	— ಪರ್ವತ ಕಣಿವೆಗಳು		
	— ಜಗತ್ತಿನಲ್ಲಿಯೇ ಎತ್ತರವಾದ ಶಿಖರಗಳು	$10 \times \frac{1}{2}$	5